# <u>ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ</u>

**ಅಸಲು ದಾವಾ ನಂ ಃ 70/2015**

**ಪಿ.ಡಬ್ಲ್ಯೂ. 1.**

**<u>ದಿನಾಂಕ 22-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.</u>**

**<u>ಪಾಟಿ ಸವಾಲು ಃ- ಶ್ರೀ ಎಸ್.ಎ.ಕೆ. ವಕೀಲರಿಂದ</u>**

**1.** 2013 ರಿಂದ ಇಲ್ಲಿಯವರೆಗೂ ನಾನು ಮಗನ ಜೊತೆ ನಮ್ಮ ತಂದೆ ತಾಯಿಯವರ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ, ಸಾಕ್ಷಿಯು ಮುಂದುವರೆದು 2015 ರವರೆಗೆ ನನ್ನ ಗಂಡ ಸುರೇಶ ಪಾಟೀಲ್ ನನ್ನ ಜೊತೆ ಇದ್ದರು. ನನ್ನ ಗಂಡ 3 ನೇ ಪ್ರತಿವಾದಿ ಶಕ್ತಿನಗರದಲ್ಲಿ ತನ್ನ ತಂದೆ ತಾಯಿ ಜೊತೆ ವಾಸ ಮಾಡುತ್ತಾರೆ ಅನ್ನುವುದು ಸರಿ. ನನ್ನ ಗಂಡ 2012 ನಲ್ಲಿ ರಸ್ತೆ ಅಪಘಾತದಲ್ಲಿ ಗಾಯಗೊಂಡಾಗಿನಿಂದ ನಡೆದಾಡಲು ಆಗುವುದಿಲ್ಲ ಅನ್ನುವುದು ಸರಿ. ನನ್ನ ಗಂಡ ದೈಹಿಕವಾಗಿ ಅಂಗ ನ್ಯೂನತೆ ಹೊಂದಿರುತ್ತಾರೆ ಅನ್ನುವುದು ಸರಿ. ನನ್ನ ಗಂಡನಿಗೆ ತನ್ನ ವೈಯಕ್ತಿಕ ಕೆಲಸಗಳನ್ನು ಸಹ ಮಾಡಲು ಆಗುವುದಿಲ್ಲ ಅನ್ನುವುದು ಸರಿ. ನನ್ನ ಗಂಡ ಅಪಘಾತ ಪರಿಹಾರವನ್ನು ಕೋರಿ ಅರ್ಜಿ ಸಲ್ಲಿಸಿದ್ದರು ಅನ್ನುವುದು ಸರಿ. ಆ ಪ್ರಕರಣದಲ್ಲಿ ಪರಿಹಾರ ಪಡೆದಿದ್ದಾರೂ ಇಲ್ಲ ಅನ್ನುವುದು ಗೊತ್ತಿಲ್ಲ. ನನ್ನ ಗಂಡನ ಚಿಕಿತ್ಸೆಗಾಗಿ ಅಂದಾಜು ರೂ. 30 ಲಕ್ಷ ದಿಂದ 40 ಲಕ್ಷ ಖರ್ಚಾಗಿದೆ ಅನ್ನುವುದು ಸುಳ್ಳು, ಸಾಕ್ಷಿಯು ಹಣ ಖರ್ಚಾಗಿರುವುದು ನಿಜ ಎಂದು ಹೇಳುತ್ತಾರೆ. ಸದರಿ ಪರಿಹಾರ ಪ್ರಕರಣದ ತಿರ್ಪಿನ ವಿರುದ್ದ ವಿಮೆ ಕಂಪನಿಯವರು ಮಾನ್ಯ ಉಚ್ಛ, ನ್ಯಾಯಾಲದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಅನ್ನುವುದು ಸರಿ . ನನ್ನ ಗಂಡನನ್ನು 2015 ನಲ್ಲಿ ನಾನೆ ಶಕ್ತಿನಗರದಲ್ಲಿ ತಂದೆ ತಾಯಿ ಮನೆಗೆ ಬಿಟ್ಟು ಬಂದಿದ್ದೇನೆ ಅನ್ನುವುದು ಸುಳ್ಳು. ನಾನು ಈ ದಾವೆ ಹಾಕುವ ಮುಂಚೆ ವಾದಿಯ ಪರವಾಗಿ ಕುಟುಂಬದ ಆಸ್ತಿಗಳಲ್ಲಿ ಬರಬೇಕಾದ ಹಿಸ್ಸೆಯನ್ನು ಕೋರಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ಆದರೆ ಆ ರೀತಿ ಹಿಸ್ಸೆ ಕೋರಿ ನಮ್ಮ ವಕೀಲರ ಮುಖಾಂತರ ಪ್ರತಿವಾದಿಯರಿಗೆ ನೋಟಿಸ್ ಕೊಟ್ಟಿರುವುದಿಲ್ಲ. ನನ್ನ ಗಂಡನಿಗೆ ಸಂಪೂರ್ಣ ಅಂಗ ನ್ಯೂನತೆ ಇದ್ದಿದ್ದು ಆತನು ಸ್ವಂತ ಕೆಲಸ ಮಾಡಿಕೋಳ್ಳದೆ ನಾನು ಅವರನ್ನು ನೋಡಿಕೊಳ್ಳದೆ ಅವರಿಗೆ ತಂದೆ ತಾಯಿ ಮನೆಗೆ ಬಿಟ್ಟು ಬಂದಿದ್ದೇನೆ ಅನ್ನುವುದು ಸುಳ್ಳು.

**2.** 5 ನೇ ಪ್ರತಿವಾದಿ ನನ್ನ ನಾದಿನಿ ಅನ್ನುವುದು ಸರಿ. 2007 ನಲ್ಲಿ 5 ನೇ ಪ್ರತಿವಾದಿ ಪಾಲು ಕೋರಿ ರಾಯಚೂರ ನ್ಯಾಯಾಲಯದಲ್ಲಿ ಉಳಿದ ಪ್ರತಿವಾದಿಯರ ವಿರುದ್ಧ ದಾವೆ ಹಾಕಿದ್ದಳು ಅನ್ನುವುದು ನನಗೆ ಗೊತ್ತಿಲ್ಲ. ನಾನು ಮದುವೆ ಆದ ನಂತರ ಶಕ್ತಿನಗರದ 1 ನೇ ಪ್ರತಿವಾದಿ ಕಟ್ಟಿಸಿದ ಮನೆಯಲ್ಲಿ ಇದ್ದೆ ಅನ್ನುವುದು ಸರಿ. ಮದುವೆ ಆದ ನಂತರದಿಂದ ನನ್ನ ಗಂಡ ಜೊತೆ ಶಕ್ತಿನಗರದ ಬೇರೆ ಮನೆಯಲ್ಲಿ ಇರುತ್ತಿದ್ದೆ ಅನ್ನುವುದು ಸುಳ್ಳು. ರಾಯಚೂರಿನ ನ್ಯಾಯಾಲದಲ್ಲಿ ಸಲ್ಲಿಸಿದ ದಾವೆಯಲ್ಲಿ ಈಗಾಗಲೆ ಎಲ್ಲ ಪ್ರತಿವಾದಿಯರಿಗೆ ಹಿಸ್ಸೆಯನಲ್ಲು ವಿಂಗಡಿಸಿ ತಿರ್ಪು ಆಗಿದೆ ಇಲ್ಲ ಅನ್ನುವುದು ಗೊತ್ತಿಲ್ಲ, ಸದರಿ ತಿರ್ಪಿನ ವಿರುದ್ದ ನನ್ನ ಗಂಡ ಹಾಗೂ ಅತ್ತೆ ಮಾವ 5 ನೇ ಪ್ರತಿವಾದಿನು ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದು ನನ್ನ ಗಮನಕ್ಕೆ ಇಲ್ಲ. ಸದರಿ ಮೇಲ್ಮನವಿಯಲ್ಲಿ ಎಲ್ಲ ಪ್ರತಿವಾದಿಯರು ಪರಸ್ಪರ ರಾಜಿ ಮಾಡಿಕೊಂಡು ಮೇಲ್ಮನವಿಯಲ್ಲಿ ಹಿಸ್ಸೆ ಪಡೆದುಕೊಂಡಿದ್ದಾರೆ ಅನ್ನುವುದು ಗೊತ್ತಿಲ್ಲ. ಸದರಿ ರಾಜಿ ಡಿಕ್ರಿ ಪ್ರಕಾರ ಈ ದಾವೆಯ ಎಲ್ಲ ಸ್ವತ್ತುಗಳ ಪೈಕಿ ನನ್ನ ಗಂಡನ ಪಾಲಿಗೆಯೆಂದು 3 ಎಕರೆ ಜಮೀನು ಬಂದಿದೆ ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಆರ್ ಎ 11/2010 ಅಂದರೆ 2013 ರಲ್ಲಿ ಇತ್ಯರ್ಥವಾದ ರಾಜಿ ಡಿಕ್ರಿಯ ಪ್ರತಿ ತೋರಿಸಿ ಅದರಂತೆ ತಿರ್ಮಾನ ಆಗಿದೆ ಎಂದು ತೋರಿಸಿದಾಗ ಸಾಕ್ಷಿಯು ಗೊತ್ತಿಲ್ಲ

ಎಂದು ಹೇಳುತ್ತಾರೆ. ಅದರಂತೆ ಪ್ರತಿವಾದಿಯರು ಅವರವರ ಪಾಲಿಗೆ ಬಂದ ಸ್ವತ್ತನ್ನು ಪ್ರತ್ಯಕ ಸ್ವಾಧೀನ ಹೊಂದಿರುತ್ತಾರೆ ಅನ್ನುವುದು ಸುಳ್ಳು. ಅದೇ ರೀತಿ ಎಲ್ಲ ಪ್ರತಿವಾದಿಯರು ಪ್ರತ್ಯಕ ವಾಸ ಮಾಡುತ್ತಿದ್ದಾರೆ ಅನ್ನುವುದು ಸುಳ್ಳು. ನಾನು 2007 ರಿಂದ 2013 ರವರೆಗೆ ಗಂಡ ಮತ್ತು ಅತ್ತೆ ಮಾವರ ಜೊತೆ ವಾಸ ಮಾಡಿರುತ್ತೇವೆ. ಹಾಗಾಗಿ ಮನೆಯಲ್ಲಿ ಆಗು ಹೋಗುವ ಎಲ್ಲ ವಿಷಯಗಳು ನನ್ನ ಗಮನಕ್ಕೂ ಬಂದಿರುತ್ತವೆ ಅನ್ನುವುದು ಸುಳ್ಳು.

**ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**